ಕ್ರಿ.ಮಿ.ನಂಃ 181/2024 ಪಿ . ಡಬ್ಲ್ಯೂಃ 1–ಸಿದ್ದಮ್ಮ ಕೋಂ ದ್ಯಾಮಣ್ಣ ಇದ್ಲಿ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 13/02/2026 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಾದ ಶ್ರೀ ಎಸ ಎಸ್, ಜಿ. ರವರಿಂದಃ**

ನಾನು ಹತ್ತನೇ ತರಗತಿಯ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಸ್ವಲ್ಪ ಸ್ವಲ್ಪ ಓದಲು ಬರುತ್ತದೆ. ಹಿಂದಿ ಮತ್ತು ಇಂಗ್ಲಿಷ್ ಓದಲು ಬರುವುದಿಲ್ಲ. ನಾನು ಪ್ರಸ್ತುತ ಪ್ರಕರಣವನ್ನು ಚೆನ್ನಾಗಿ ಇಟ್ಟುಕೊಂಡು ಬಾಳುವೆ ಮಾಡಲಿ ಎಂದು ಹಾಕಿರುತ್ತೇನೆ. ಈ ಉದ್ದೇಶವನ್ನು ಹೊರತು ಪಡಿಸಿ ಬೇರೆ ಯಾವುದೇ ಉದ್ದೇಶ ಇರುವುದಿಲ್ಲ . ಈ ಪ್ರಕರಣವನ್ನು ದಾಖಲು ಮಾಡಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಯನ್ನು ಸ್ವಲ್ಪ ಸ್ವಲ್ಪ ಓದಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಬರೆದಿರುತ್ತದೆ ಎಂದು ನಾನು ಸಂಪೂರ್ಣವಾಗಿ ತಿಳಿದುಕೊಂಡಿರುತ್ತೇನೆ. ನನ್ನ ಮದುವೆ 2020 ರಲ್ಲಿ ಮುಷ್ಟಿಗೇರಿಯಲ್ಲಿ ಬೀರಲಿಂಗೇಶ್ವರ ಜಾತ್ರೆಯಲ್ಲಿ ಆಗಿರುತ್ತದೆ. ನನ್ನ ಮದುವೆ ಕಾಲಕ್ಕೆ ನಾನು ಹತ್ತನೇ ತರಗತಿಯನ್ನು ಮುಗಿಸಿ ಎರಡು ಮೂರು ವರ್ಷಗಳು ಆಗಿದ್ದವು. ನನ್ನ ಮದುವೆಯಾದಾಗ ನನಗೆ 21 ವರ್ಷ ಆಗಿತ್ತು. ನಾನು ಮದುವೆ ಆದ ನಂತರ ನನ್ನ ಗಂಡನ ಮನೆಯಲ್ಲಿ ಮೂರು ವರ್ಷಗಳ ಕಾಲ ಇರುತ್ತೇನೆ. ಮೂರು ವರ್ಷಗಳ ಕಾಲ ನನ್ನ ಜೊತೆಗೆ ನನ್ನ ಗಂಡ ಅತ್ತೆ ಮಾವ , ನನ್ನ ಮೈದುನ ಮತ್ತು ಇಬ್ಬರೂ ಹೆಣ್ಣು ಮಕ್ಕಳು ಒಂದೇ ಮನೆಯಲ್ಲಿ ಇದ್ದೇವು. ಸದರಿ ಇಬ್ಬರೂ ಹೆಣ್ಣು ಮಕ್ಕಳಲ್ಲಿ ಒಬ್ಬರು ಮದುವೆಯಾದವರು ಮತ್ತೊಬ್ಬರು ಮದುವೆಯಾಗದವರು ಇರುತ್ತಾರೆ. ನನಗೆ ನನ್ನ ಗಂಡ ,ಅತ್ತೆ ಮಾವ , ಮತ್ತು ಇಬ್ಬರೂ ಹೆಣ್ಣು ಮಕ್ಕಳು ಹೊಡೆದಿರುತ್ತಾರೆ. ನಾನು ಆ ಸಂದರ್ಭದಲ್ಲಿ ದೂರನ್ನು ದಾಖಲಿಸಿರುತ್ತೇನೆ. (ಈ ಹಂತದಲ್ಲಿ ಸಾಕ್ಷಿಯು ಕಣ್ಣೀರು ಹಾಕುತ್ತಾ ಉತ್ತರವನ್ನು ನೀಡಿರುತ್ತಾರೆ) . ನಾನು ಕೊಟ್ಟ ದೂರಿನ ಪ್ರತಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ನಾನು ಮಹಿಳಾ ಸಾಂತ್ವನ ಕೇಂದ್ರಕ್ಕೆ ಹೋಗಿರುವ ಬಗ್ಗೆ ಅಧಿಕಾರಿಗಳಿಂದ ಪಡೆದುಕೊಂಡ ಅರ್ಜಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೀನೋ ಅಥವಾ ಇಲ್ಲವೋ ಎಂದು ನನಗೆ ನೆನಪಿಲ್ಲ. ನಾನು ಮುಷ್ಠಿಗೇರಿಯಲ್ಲಿದ್ದಾಗ ಒಂದೇ ಒಂದು ಬಾರಿಯೂ ಸಹ ಮತದಾನವನ್ನು ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನನ್ನ ಮತ್ತು ಎದುರುದಾರರ ಹೆಸರು ಮತದಾನದ ಪಟ್ಟಿಯಲ್ಲಿ ದಾಖಲಾಗಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ಆಧಾರ ಕಾರ್ಡನ್ನು ಮಾಡಿಸಿರುತ್ತೇನೆ. ಸದರಿ ಆಧಾರ ಕಾರ್ಡನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ಎದುರುದಾರರ ಪಡಿತರ ಚೀಟಿಯಲ್ಲಿ ನನ್ನ ಹೆಸರು ದಾಖಲಾಗಿರುವುದಿಲ್ಲ. ಸಾಕ್ಷಿಯು ಮುಂದುವರೆದು ಎದುರುದಾರರದ್ದು ಪಡಿತರ ಚೀಟಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ಗಂಡ ವ್ಯವಸಾಯವನ್ನು ಮಾಡುತ್ತಾರೆ. ನನ್ನ ಗಂಡನಿಗೆ ಸಂಬಂಧಿಸಿದ ಆಸ್ತಿ ನಂ.121 ಆಗಿರುತ್ತದೆ. ನನ್ನ ಗಂಡನಿಗೆ ಎಷ್ಟು ಆಸ್ತಿ ಇರುತ್ತದೆ ಎನ್ನುವ ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ನನ್ನ ಗಂಡನ ಹೆಸರಿನಲ್ಲಿ ಒಂದು ಎಕರೆ ಒಂದು ಕಡೆ ಮತ್ತು ಮೂರು ಎಕರೆ ನಲವತ್ತು ಗುಂಟೆ ಒಂದು ಕಡೆ ಇರುತ್ತದೆ. ಅವುಗಳ ಸರ್ವೆ ನಂ.121 ಆಗಿರುತ್ತದೆ. ನನ್ನ ಗಂಡನ ಮನೆಯವರು ರೆಡ್ಡಿಯವರ ಹೊಲವನ್ನು ಲಾವಣಿ ಮಾಡುತ್ತಾರೆ . ಸದರಿ ಲಾವಣಿ ಪತ್ರ ಮತ್ತು ಕರಾರು ಪತ್ರಗಳನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ನನಗೆ ಬಿಪಿ , ಶುಗರ್ ಮತ್ತು ದೈಹಿಕ ಯಾವುದಾದರೂ ಖಾಯಿಲೆಗಳು ಇರುತ್ತವೆಯೇ ಎಂದು ಕೇಳಲಾದ ಪ್ರಶ್ನೆಗೆ ಸಾಕ್ಷಿಯು ನನ್ನ ಕಾಲು

ಹರಿಯುತ್ತವೆ , ಆಗಾಗ ಜ್ವರ ಬರುತ್ತದೆ, ನಾನು ಆಸ್ಪತ್ರೆಗೆ ಹೋದಾಗ ವೈದ್ಯರು ಮಾನಸಿಕರಾಗಿರುತ್ತೀರಿ ಎಂದು ಹೇಳಿರುತ್ತಾರೆ ಮತ್ತು ರಕ್ತ ಇರುವುದಿಲ್ಲ ಎಂದು ಹೇಳಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು ರೋಣದ ರೆಡ್ಡಿ ಮೆಡಂ ಹತ್ತಿರ ತೋರಿಸಿರುತ್ತೇನೆ. ನಾನು ಮಾನಸಿಕಳಾಗಿರುವ ಬಗ್ಗೆ ಯಾವುದೇ ಪ್ರಮಾಣ ಪತ್ರವನ್ನು ವೈದ್ಯರು ನೀಡಿರುವುದಿಲ್ಲ. ವೈದ್ಯರು ಮಾನಸಿಕವಾಗಿ ಯೋಚನೆ ಮಾಡಬೇಡಿ,  ಚೆನ್ನಾಗಿ ಊಟ ಮಾಡಿ ಇರಿ ಎಂದು ಹೇಳಿರುತ್ತೀರಿ . ನನಗೆ ಮಾನಸಿಕ ಖಾಯಿಲೆ ಇರುತ್ತದೆ. ನಾನು ದಿನಂಪ್ರತಿ ಯಾವುದೇ ಗುಳಿಗೆಗಳನ್ನು ತೆಗೆದುಕೊಳ್ಳುವುದಿಲ್ಲ ಆದರೆ ತೋರಿಸಿಕೊಂಡು ಹೋದಾಗ ಗುಳಿಗೆಗಳನ್ನು ತೆಗೆದುಕೊಳ್ಳುತ್ತೇನೆ. ನಾನು 2024 ರಿಂದ ನಮ್ಮ ತಂದೆ ತಾಯಿಯವರ ಜೊತೆಗೆ ಇರುತ್ತೇನೆ. ನನ್ನ ತಂದೆಯವರೇ ನನ್ನ ಖರ್ಚು ವೆಚ್ಚಗಳನ್ನು ನೋಡುತ್ತಾರೆ ಎಂದರೆ ಸರಿ . ನನ್ನ ತಂದೆಯವರಿಗೆ ಇಬ್ಬರೂ ಹೆಣ್ಣು ಮಕ್ಕಳು , ಇಬ್ಬರೂ ಗಂಡು ಮಕ್ಕಳು ಇರುತ್ತೇವೆ. ನನ್ನ ತಂದೆಯವರಿಗೆ ಹಿರೇಹಾಳ ಗ್ರಾಮದಲ್ಲಿ ಎರಡು ಎಕರೆ ಹೊಲ ಇರುತ್ತವೆ. ನಾನು ನನ್ನ ತಂದೆಯವರ ಜೊತೆಗೆ ಕೆಲಸಕ್ಕೆ ಹೋಗುವುದಿಲ್ಲ.

**ಕೋರಿಕೆಯ ಮೇರೆಗೆ ಮುಂದುವರೆದ ಪಾಟೀಸವಾಲುನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್ )**
ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.